ಎಸ್.ಸಿ.ನಂ.139/2019
ಚಾ.ಸಾ.9/ಪ್ರಾ.ಸಾ.5

**ತಾಃ 19.04.2023 ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರ ಶ್ರೀ. ಎನ್.ಆರ್.ಎಸ್ ವಕೀಲರಿಂದಃ**

ಚಾಸಾ.1 ರವರು ನನ್ನ ಆತ್ಮೀಯ ಸ್ನೇಹಿತರಾಗಿರುತ್ತಾರೆ. ನಮ್ಮ ಮನೆಯಿಂದ ಚಾಸಾ.1 ರವರ ಮನೆಗೆ ನಡೆದುಕೊಂಡು ಹೋದಲ್ಲಿ 3 ನಿಮಿಷ ಸಮಯ ಆಗುತ್ತದೆ. ನಾನು ಹಾಗೂ ಚಾಸಾ.1 ರವರು ವಾರಕ್ಕೆ ಸುಮಾರು 4-5 ಬಾರಿ ಭೇಟಿ ಮಾಡುತ್ತೇವೆ ಎಂದರೆ ಸರಿ. ನಾವಿಬ್ಬರೂ ಪರಸ್ಪರ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುತ್ತೇವೆ ಎಂದರೆ ಸರಿ.

2. ನಮ್ಮ ಮನೆಯಿಂದ ವರ್ತೂರು ಪೊಲೀಸ್ ಠಾಣೆ ಅಂದಾಜು 5 ಕಿ.ಮೀಟರ್ ಇರುತ್ತದೆ. ನನ್ನ ಮೊಬೈಲ್ ನಂಬರ್, ಹೆಸರು ಹಾಗೂ ನನ್ನ ಮನೆ ವಿಳಾಸ ವರ್ತೂರು ಪೊಲೀಸರಿಗೆ ಮೊದಲು ತಿಳಿದಿರಲಿಲ್ಲ ಎಂದರೆ ಸರಿ. ಪೊಲೀಸರು ನನಗೆ ನೋಟಿಸ್ ಕೊಡುವ ಪೂರ್ವದಲ್ಲಿ ನಾನು ನಮ್ಮ ಮನೆಯಲ್ಲಿ ಇದ್ದೇನು. ನೋಟಿಸ್ ಅನ್ನು ನನಗೆ ತಂದು ಕೊಟ್ಟ ಪೊಲೀಸ್ ಕಾನ್‌ಸ್ಟೇಬಲ್ ಇವರ ಹೆಸರನ್ನು ಹೇಳಲು ಆಗುವುದಿಲ್ಲ. ಪೊಲೀಸರು ನೋಟಿಸ್ ಜಾರಿ ಮಾಡಲು ಬೆಳಿಗ್ಗೆ 6.30 ರಿಂದ 7.00 ಗಂಟೆ ಸಮಯದಲ್ಲಿ ನಮ್ಮ ಮನೆಯ ಬಳಿ ಬಂದಿದ್ದರು. ಸದರಿ ನೋಟೀಸ್ ನಲ್ಲಿ ಕೇಸ್ ನಂಬರ್, ಅಪರಾಧದ ಸೆಕ್ಷನ್ ಹಾಗೂ ಆರೋಪಿತರ ಹೆಸರನ್ನು ಬರೆದಿದ್ದು ನಾನು ಅದನ್ನು ಅಷ್ಟಾಗಿ ಗಮನಿಸಿಲ್ಲ. ಸದರಿ ನೊಟಿಸ್ ಅನ್ನು

ಯಾರು ಯಾರಿಗೆ ಬರೆದಿದ್ದರು ಎಂದು ನನಗೆ ತಿಳಿದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸ್ ಠಾಣೆಗೆ ಸುಮಾರು 4 ಅಥವಾ 5 ಬಾರಿ ಹೋಗಿದ್ದೇನು. ಪೊಲೀಸ್ ನವರು ನೀಡಿದ ನೋಟಿಸ್ ಗೆ ಯಾರು ಸಹಿ ಮಾಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಅದೇ ದಿನ ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಒಂದು ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿರುತ್ತೇನೆ ಎಂದು ಹೇಳಿದ ದಾಖಲೆಯಲ್ಲಿ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ.

3. ಸಾಕ್ಷಿದಾರರಿಗೆ ನಿ.ಪಿ.32(ಎ) ಸಹಿಯನ್ನು ತೋರಿಸಿ ಅದೇ ಸಹಿಯನ್ನು ನೀವು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೀರಿ ಎಂದು ಸೂಚಿಸಿದ್ದು ಸಾಕ್ಷಿಯು ಅದೇ ಸಹಿ ಎಂದು ಒಪ್ಪಿರುತ್ತಾರೆ. ನನಗೆ ಕನ್ನಡ ಭಾಷೆ ಓದಲು, ಬರೆಯಲು ಬರುತ್ತದೆ. ನಮ್ಮ ಮನೆ ವೈಟ್‌ಪೀಲ್ಡ್ ನಲ್ಲಿ ಇದ್ದು ನಮ್ಮ ಮನೆಯಿಂದ ಹೆಚ್ ಕ್ರಾಸ್ ಬಳಿ ಇರುವ ಕ್ಯಾಲನೂರು ಸುಮಾರು 45 ರಿಂದ 50 ಕಿ.ಮೀ ದೂರ ಇರುತ್ತದೆ ಎಂದರೆ ಸರಿ. ಪೊಲೀಸರು ನನಗೆ ನೋಟೀಸ್ ನೀಡಿದ ತಕ್ಷಣ ನಾನು ಚಾಸಾ.1 ರವರನ್ನು ಕರೆದುಕೊಂಡು ಪೊಲೀಸ್ ಠಾಣೆಗೆ ಬೆಳಿಗ್ಗೆ 7.15 ಕ್ಕೆ ಹೋಗಿದ್ದು ಠಾಣೆಯಲ್ಲಿ ಅಂದಾಜು 8.00 ಗಂಟೆ ಅಥವಾ 8.05 ಸಮಯದವರೆಗೆ ಇದ್ದೇವು. ಠಾಣೆಯಲ್ಲಿ ಪೊಲೀಸರು ನಮ್ಮ ಮುಂದೆ ಯಾವುದೇ ಬರವಣಿಗೆ ಮಾಡಿರುವುದಿಲ್ಲ.

4. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿಯನ್ನು

ನೋಡಿ ಆತನ ಹೆಸರು ಪವನ್ ಎಂದು ನುಡಿದಿರುತ್ತಾರೆ. ನಾನು ಠಾಣೆಗೆ ಹೋದಾಗ ಎಲ್ಲಾ ಆರೋಪಿತರು ಲಾಕಪ್ ಒಳಗೆ ಇದ್ದರು. ನಾವು ಆ ದಿನ ಠಾಣೆಯಿಂದ ಬೆಳಿಗ್ಗೆ 8.05 ಕ್ಕೆ ಹೊರಟಿರುತ್ತೇವೆ. ನಾನು ಠಾಣೆಗೆ ಹೋದ ಸಮಯದಲ್ಲಿ ಠಾಣೆಯಲ್ಲಿ 2 ರಿಂದ 3 ಜನ ಸಾರ್ವಜನಿಕರು ಇದ್ದರು. ನಾವು ಠಾಣೆಗೆ ಹೋದ ಸಮಯದಲ್ಲಿ ವೃತ್ತ ನಿರೀಕ್ಷಕರಾದ ರಾಮಚಂದ್ರ ಇವರು ಠಾಣೆಯಲ್ಲಿ ಇದ್ದರು. ಆ ದಿನ ನಮ್ಮ ಜೊತೆ ಪೊಲೀಸರು ಬಂದಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ವಾಹನದ ಮುಂದೆ ಪೊಲೀಸ್ ಜೀಪ್ ಇತ್ತು ಎಂದು ನುಡಿದಿರುತ್ತಾರೆ. ಪೊಲೀಸ್ ಜೀಪ್ ನಲ್ಲಿ ಸುಮಾರು 3 ಜನ ಪೊಲೀಸರು ಹಾಗೂ ಅವರ ಜೊತೆಯಲ್ಲಿ ಚಾಸಾ.47 ರವರು ಇದ್ದರು. ಸಾಕ್ಷಿಯು ಮುಂದುವರೆದು ಅದೇ ಜೀಪ್ ನಲ್ಲಿ 5 ನೇ ಆರೋಪಿಯನ್ನು ಹೊರತುಪಡಿಸಿ ಉಳಿದ 4 ಜನ ಆರೋಪಿತರು ಇದ್ದರು ಎಂದು ನುಡಿದಿರುತ್ತಾರೆ.

5. ಪೊಲೀಸ್ ಜೀಪ್ ನಲ್ಲಿ ನನ್ನ ಪ್ರಕಾರ 4 ಜನ ಆರೋಪಿತರು ಹಾಗೂ ಚಾಲಕನನ್ನು ಸೇರಿ ಒಟ್ಟು 4 ಜನ ಪೊಲೀಸರು ಇದ್ದರು.

ಈ ಹಂತದಲ್ಲಿ ಮಧ್ಯಾಹ್ನ 2.00 ಗಂಟೆ ಸಮಯ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

<u>ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಆರೋಪಿಪರ ಶ್ರೀ. ಎಮ್.ಆರ್. ಎನ್ ವಕೀಲರಿಂದಃ</u>

6. ನಾವು ಪೊಲೀಸ್ ಠಾಣೆ ಬಿಡುವಾಗ ನಾವು ಮಹಜರ್ ಗೆ ಹೋಗುತ್ತಿರುವುದಾಗಿ ತಿಳಿಸಿದರು. ಪೊಲೀಸ್ ರ ವಾಹನ ಮುಂದೆ ಹೋಗುತ್ತಿದ್ದು ಅದರ ಹಿಂದೆ ನಮ್ಮ ವಾಹನ ಹೋಗುತ್ತಿತ್ತು. ಪೊಲೀಸ್ ವಾಹನದಲ್ಲಿ ಚಾಲಕನ ಪಕ್ಕದ ಸೀಟ್‌ನಲ್ಲಿ ಇನ್ಸ್ ಪೆಕ್ಟರ್ ಕುಳಿತಿದ್ದರು. ನಮ್ಮ ವಾಹನ ಪೊಲೀಸ್ ವಾಹನದ ಹಿಂಭಾಗದಲ್ಲಿ ಇದ್ದ ಕಾರಣ ಪೊಲೀಸ್ ವಾಹನದ ಚಾಲಕನಿಗೆ ಯಾರು ದಾರಿ ತೋರಿಸುತ್ತಿದ್ದರು ಎಂದು ನಮಗೆ ತಿಳಿದಿರಲಿಲ್ಲ ಎಂದರೆ ಸರಿ. ನಾವು ಕ್ಯಾಲನೂರಿಗೆ ತಲುಪಿದಾಗ ಅಂದಾಜು ಸಮಯ ಬೆಳಿಗ್ಗೆ 9.30 ಆಗಿತ್ತು. ಕ್ಯಾಲನೂರು ತಲುಪುವ ಮೊದಲು ಮಧ್ಯದಲ್ಲಿ ಪೊಲೀಸ್ ವಾಹನ ಎಲ್ಲೂ ನಿಲ್ಲಿಸಿರಲಿಲ್ಲ. ಆ ದಿನ ಬಂದಂತಹ ಪೊಲೀಸ್ ಜೀಪಿನ ನಂಬರ್ ನನಗೆ ನೆನಪಿಲ್ಲ. ಪೊಲೀಸ್ ಜೀಪ್ ನಂಬರ್ ಅನ್ನು ಠಾಣೆಯಲ್ಲಿ ಬರೆದಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

7. ಕ್ಯಾಲನೂರಿನಲ್ಲಿ ಸುಮಾರು 250 ರಿಂದ 300 ಮನೆಗಳು ಇರುತ್ತವೆ ಎಂದರೆ ಸರಿ. ನಾವು ಹೊಸಕೋಟೆಯಿಂದ ಚಿಂತಾಮಣಿ ಮಾರ್ಗವಾಗಿ ಕೈವಾರ ಮೂಲಕ ಕ್ಯಾಲನೂರಿಗೆ ಹೋಗಿರುತ್ತೇವೆ. ನನ್ನ ಪ್ರಕಾರ ಕ್ಯಾಲನೂರು ಚಿಂತಾಮಣಿಗೆ ಹೋದ ನಂತರ ಹೆಚ್ ಕ್ರಾಸ್ ದಾಟಿದ ನಂತರ ಮುಖ್ಯ ರಸ್ತೆಯಲ್ಲಿ ಕ್ಯಾಲನೂರು ಸಿಗುತ್ತದೆ ಎಂದರೆ ಸರಿ. ಕ್ಯಾಲನೂರಿನಲ್ಲಿ ಸ್ಥಳಕ್ಕೆ ಹೋಗಲು ಪೊಲೀಸ್ ನವರು ಬೇರೆ ಯಾರನ್ನು ಕರೆದುಕೊಂಡಿಲ್ಲ. ನಾವು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ 15 ರಿಂದ 20 ಜನ ಸೇರಿದ್ದರು. ಸದರಿ ಸ್ಥಳದಲ್ಲಿ ಬೇರೆ ಪೊಲೀಸ್ ನವರು ಇದ್ದರು ಎಂದರೆ ನನಗೆ ತಿಳಿದಿಲ್ಲ.

8. ನಾವು ಹೋಗಿದ್ದ ಸ್ಥಳ ಕ್ಯಾಲನೂರು ದಾಟಿದ ನಂತರ ಒಂದು ತೋಟದಲ್ಲಿ ಇರುತ್ತದೆ. ಅಕ್ಕಪಕ್ಕದವರನ್ನು ವಿಚಾರಿಸಿದಾಗ ಸದರಿ ತೋಟದ ಮಾಲೀಕರು ನಾರಾಯಣಸ್ವಾಮಿ ಎಂದು ತಿಳಿಸಿರುತ್ತಾರೆ. ಸ್ಥಳಕ್ಕೆ ಪೊಲೀಸರು ನಾರಾಯಣಸ್ವಾಮಿ ಇವರನ್ನು ಕರೆಯಿಸಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಸದರಿ ಜಾಗ ತೋಟ ಆಗಿದ್ದು ನೂರಾರು ಎಕರೆ ಇರುತ್ತದೆ ಎಂದರೆ ಸರಿ. ಸದರಿ ಸ್ಥಳ ವ್ಯವಾಸಾಯದ ಜಮೀನು ಆದ ಕಾರಣ ಕುರಿ, ದನ ಮೇಯಿಸುವವರು ಜಮೀನಿನಲ್ಲಿ ಇದ್ದರು ಎಂದರೆ ಸಾಕ್ಷಿಯ ಜಮೀನಿನಲ್ಲಿ ಇರಲಿಲ್ಲ ರಸ್ತೆಯಲ್ಲಿ ಇದ್ದರು ಎಂದು ನುಡಿದಿರುತ್ತಾರೆ. ಬೆಂಗಳೂರು-ಹೆಚ್ ಕ್ರಾಸ್-ಚಿಂತಾಮಣಿ ಸಾಕಷ್ಟು ವಾಹನ ಸಂಚಾರ ಇರುತ್ತದೆ ಎಂದರೆ ಸರಿ.

9. ಪೊಲೀಸರು ಸ್ಥಳದಲ್ಲಿ ಇದ್ದಂತಹ ಜನರನ್ನು ಬರಮಾಡಿಕೊಂಡಿರುವುದಿಲ್ಲ. ಸದರಿ ಸ್ಥಳದಲ್ಲಿ 15 ರಿಂದ 20 ಜನ ಸೇರಿದ್ದರು. ಸದರಿ ಸ್ಥಳದಲ್ಲಿ ಸೇರಿದ್ದ ಸಾರ್ವಜನಿಕರ ಸಹಿಯನ್ನು ಪೊಲೀಸರು ಪಡೆದಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಆ ಸ್ಥಳದಲ್ಲಿ ಪೋಲೀಸರು ಎಷ್ಟು ಜನರ ಸಹಿ ಪಡೆದಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ತಿಳಿದಿಲ್ಲ ಎಂದು ನುಡಿದು ನಂತರ ನನ್ನ ಹಾಗೂ ಮುನಿರಾಜು ಎಂಬುವವರ ಸಹಿ ಪಡೆದಿರುವುದಾಗಿ ನುಡಿದಿರುತ್ತಾರೆ. ನಮ್ಮಿಬ್ಬರ ಸಹಿ ಹೊರತುಪಡಿಸಿ ಇನ್ನು ಎಷ್ಟು ಜನರ ಸಹಿ ಪಡೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ಬರವಣಿಗೆ ಮಾಡಿಕೊಂಡಿದ್ದು, ಬರವಣಿಗೆ ಮಾಡಿದ ವ್ಯಕ್ತಿಯ ಸಹಿಯನ್ನು ದಾಖಲೆಗೆ ಪಡೆದಿರುತ್ತಾರೋ ಇಲ್ಲವೋ ಎಂದು ನನಗೆ

ತಿಳಿದಿಲ್ಲ.

10. ಸ್ಥಳದಲ್ಲಿ ಇದ್ದ ಶೆಡ್ ನ ಬಾಗಿಲು ಯಾವ ದಿಕ್ಕಿನಲ್ಲಿ ಇತ್ತು, ಶೆಡ್ ನ ಚಕ್ಕುಬಂದಿ ಏನು ಎಂದು ನನಗೆ ಹೇಳಲು ಆಗುವುದಿಲ್ಲ. ಆ ಸ್ಥಳದಲ್ಲಿ ನಾವು ಬೆಳಿಗ್ಗೆ 11.30 ರವರೆಗೆ ಇದ್ದೇವು. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಕಬ್ಬಿಣದ ರಾಡ್ ಗಳಲ್ಲಿ ಕಡಿಮೆ ಉದ್ದದ ರಾಡ್ ಅನ್ನು (ಮು.ಮಾ.4) ನೋಡಿ ಅದನ್ನು 3 ನೇ ಆರೋಪಿ ಪವನ್ ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಮು.ಮಾ.4 ರ ರಾಡ್ ಮೇಲೆ ಯಾವುದೇ ರಕ್ತದ ಕಲೆ ಇಲ್ಲ ಎಂದರೆ ಸರಿ. ಮು.ಮಾ.3 ರ ರಾಡ್ ಮೇಲೆ ರಕ್ತದ ಕಲೆ ಇಲ್ಲ ಎಂದರೆ ಸಾಕ್ಷಿಯು ಎರಡು ಕಡೆ ಇರುವುದಾಗಿ ನುಡಿದಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ನನ್ನಿಂದ ಒಂದು ಸಹಿಯನ್ನು ಮಾತ್ರ ಪಡೆದಿರುತ್ತಾರೆ. ಸ್ಥಳದಲ್ಲಿ ಸುಮಾರು 10 ಅಥವಾ ಅದಕ್ಕಿಂತ ಹೆಚ್ಚಿನ ಸಹಿಗಳನ್ನು ನನ್ನಿಂದ ಪಡೆದಿರುತ್ತಾರೆ. ಅದೇ ರೀತಿ ಸ್ಥಳದಲ್ಲಿ ಪೇಪರ್ ಚೀಟಿಗಳ ಮೇಲೆ ನನ್ನ ಹಾಗೂ ಚಾಸಾ.8 ಮುನಿರಾಜು ಇವರ ಸಹಿ ಪಡೆದಿರುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ಸಹಿ ಇದ್ದ ಚೀಟಿಗಳನ್ನು ನಮ್ಮ ಸಮಕ್ಷಮ ವಸ್ತುಗಳು ಇದ್ದ ಬ್ಯಾಗ್ ಮೇಲೆ ಅಂಟಿಸಿರುತ್ತಾರೆ. ಸ್ಥಳದಲ್ಲಿ ನನ್ನ ಹಾಗೂ ಚಾಸಾ.8 ರವರ ಸಹಿ ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿಲ್ಲ ಎಂದರೆ ನನಗೆ ತಿಳಿದಿಲ್ಲ. ಸದರಿ ಚೀಟಿಗಳ ಮೇಲೆ ಪೊಲೀಸರು ಬರವಣಿಗೆ ಮಾಡಿದ್ದು ಅದು ಏನು ಎಂದು ನನಗೆ ತಿಳಿದಿಲ್ಲ. ಮು.ಮಾ.3 ರಲ್ಲಿ ಎರಡು ಕಡೆ ರಕ್ತ ಇರುವುದಾಗಿ ಹೇಳಿದ್ದು ಅದು ರಕ್ತದ ಕಲೆ ಅಲ್ಲ ಕಿಲುಬು ಹಿಡಿದಿರುವ ಕಲೆ ಆಗಿರುತ್ತದೆ ಎಂದರೆ ಸರಿಯಲ್ಲ.

11. ಮು.ಮಾ.15 ರಿಂದ 22 ರಲ್ಲಿ ಒಳಗೊಂಡ ಬಟ್ಟೆಗಳಲ್ಲಿ ಯಾವ ಆರೋಪಿ ಯಾವ ಬಟ್ಟೆಯನ್ನು ಪೊಲೀಸರಿಗೆ ತೆಗೆದುಕೊಟ್ಟಿರುತ್ತಾರೆ ಎಂದು ಹೇಳಲು ನನಗೆ ಆಗುವುದಿಲ್ಲ. ಅದೇ ರೀತಿ ಸದರಿ ಬಟ್ಟೆಗಳಲ್ಲಿ ಯಾವ ಬಟ್ಟೆ ಯಾರಿಗೆ ಸೇರಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನಾವು ಸ್ಥಳಕ್ಕೆ ಹೋದಾಗ ಶೆಡ್ ನ ಬಾಗಿಲಿಗೆ ಯಾವುದೇ ಬೀಗ ಹಾಕಿರಲಿಲ್ಲ. ಸದರಿ ಬಾಗಿಲಿಗೆ ಯಾವುದೇ ಚೀಲಕ ಇರಲಿಲ್ಲ ಎಂದರೆ ಸಾಕ್ಷಿಯು ಚೈನ್ ಟೈಪ್ ಚೀಲಕ ಇತ್ತು ಎಂದು ನುಡಿದಿರುತ್ತಾರೆ. ಸದರಿ ಶೆಡ್ ನ ಬಾಗಿಲಿಗೆ ಬೀಗ ಇಲ್ಲದಿದ್ದ ಕಾರಣ ಶೆಡ್ ಇದ್ದ ಜಾಗ ತೆರೆದ ಸ್ಥಳ ಆಗಿದ್ದರಿಂದ ಅಲ್ಲಿಗೆ ಯಾರು ಬೇಕಾದರೂ ಹೋಗಿ ಬಂದು ಮಾಡಬಹುದು ಎಂದರೆ ಸರಿ. ಆ ದಿನ ನಾನು ನೋಡಿದಂತಹ ನಿ.ಪಿ.6 ರಿಂದ 11 ಹಾಗೂ 33 ಮತ್ತು 34 ರ ಪೋಟೋಗಳನ್ನು ಪೊಲೀಸರು ತೆಗೆದಿದ್ದು ಅವರ ಹೆಸರು ನನಗೆ ತಿಳಿದಿಲ್ಲ. ಅದೇ ರೀತಿ ಸದರಿ ಪೋಟೋಗಳನ್ನು ಎಲ್ಲಿ ಪ್ರಿಂಟ್ ಮಾಡಿಸಿರುತ್ತಾರೆ ವಾಶ್ ಮಾಡಿಸಿರುತ್ತಾರೆ ಎಂದು ನನಗೆ ತಿಳಿದಿಲ್ಲ.

12. ನಾವು ಸ್ಥಳಕ್ಕೆ ಹೋದ ಕಾರಿನ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ಇದ್ದ ಕಾರಿನಿಂದ ಆರ್ ಸಿ ದಾಖಲೆಗಳನ್ನು ಪೊಲೀಸರು ತೆಗೆದುಕೊಂಡರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನಾನು ನ್ಯಾಯಾಲಯದ ಮುಂದೆ ಗುರುತಿಸಿದ ವಸ್ತುಗಳನ್ನು ಬಿಟ್ಟು ಪೊಲೀಸರು ಆ ದಿನ ಸ್ಥಳದಿಂದ ಏನೇನೂ ವಸ್ತುಗಳನ್ನು ತೆಗೆದುಕೊಂಡಿರುತ್ತಾರೆ ಎಂದು ನನಗೆ ತಿಳಿದಿಲ್ಲ.ದ್ವಿಚಕ್ರ ವಾಹನದ ಆರ್.ಸಿ ಪುಸ್ತಕಗಳನ್ನು ನಾನು ನೋಡಲಿಲ್ಲ, ಆರ್ ಸಿ ದಾಖಲೆಗಳನ್ನು ಪೊಲೀಸರು

ನೋಡಿರುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ದ್ವಿಚಕ್ರ ವಾಹನಗಳಲ್ಲಿ ಒಂದು ವಾಹನ ಶಿವುಕುಮಾರ್ ಹಾಗೂ ಮತ್ತೊಂದು ವಾಹನ ನವಾಜ್ ಇವರಿಗೆ ಸೇರಿರುವುದಾಗಿ ಸ್ಥಳಕ್ಕೆ ಬಂದ ಆರೋಪಿಗಳು ತಿಳಿಸಿರುತ್ತಾರೆ. ಆರೋಪಿತರು ಸದರಿ ದ್ವಿಚಕ್ರ ವಾಹನಗಳ ಮಾಲೀಕರು ಎಂದು ಸ್ಥಳದಲ್ಲಿ ಹೇಳಿದ್ದನ್ನು ಪೊಲೀಸರು ಬರೆದುಕೊಂಡಿರುತ್ತಾರೆ. ಸಾಕ್ಷಿದಾರರು ನಿ.ಪಿ.32 ಮಹಜರ್ ನೋಡಿ ಅದರಲ್ಲಿ ಆರೋಪಿತರು ದ್ವಿಚಕ್ರ ವಾಹನಗಳ ಮಾಲೀಕರು ಎಂದು ಹೇಳಿದ್ದನ್ನು ಬರೆದಿಲ್ಲ ಎಂದು ನುಡಿದಿರುತ್ತಾರೆ. ನಿ.ಪಿ.32 ರಲ್ಲಿ ಕಾರಿನ ಮಾಲೀಕರು ಯಾರು ಎಂದು ಬರೆದಿಲ್ಲ ಎಂದರೆ ಸರಿ.

13. ಪೊಲೀಸರು ಸ್ಥಳದಲ್ಲಿ ಎಷ್ಟು ಪುಟ ಬರವಣಿಗೆ ಮಾಡಿರುತ್ತಾರೆ ಎಂದು ಹೇಳಲು ನನಗೆ ಆಗುವುದಿಲ್ಲ. ಮಹಜರ್ ಗೆ ಪೊಲೀಸರು ಜಾಸ್ತಿ ಸಹಿ ಪಡೆದಿರುತ್ತಾರೆ. ನನ್ನ ಪ್ರಕಾರ ಮಹಜರ್ ಗೆ 10ರಿಂದ 12 ಸಹಿಗಳನ್ನು ಪಡೆದಿರುತ್ತಾರೆ. ನಿ.ಪಿ.32 ದಾಖಲೆಯನ್ನು ಸಾಕ್ಷಿದಾರರಿಗೆ ತೋರಿಸಿ ನಿಮ್ಮ ಸಹಿ ಒಂದು ಕಡೆ ಮಾತ್ರ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ವಸ್ತುಗಳ ಮೇಲೆ ಮಾಡಿದ ಸಹಿಗಳನ್ನು ಸೇರಿಸಿ 10ಕ್ಕಿಂತ ಹೆಚ್ಚು ಸಹಿಗಳನ್ನು ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಒಂದೊಂದು ವಸ್ತುಗಳಿಗೂ ಪೊಲೀಸರು ಪ್ರತ್ಯೇಕ ಪ್ರತ್ಯೇಕ ಮಹಜರ್ ಮಾಡಿರುತ್ತಾರೆ.

14. ದಿಃ25.08.2018 ರಂದು ಕ್ಯಾಲನೂರು ಗ್ರಾಮದ ನಾರಾಯಣಸ್ವಾಮಿ

ತೋಟದಲ್ಲಿ ಇರುವ ಕುರಿ ಶೆಡ್ ಬಳಿ ಯಾವುದೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮು.ಮಾ.3 ರಿಂದ 7 ಹಾಗೂ 15 ರಿಂದ 22 ವಸ್ತುಗಳನ್ನು ತೆಗೆದು ಹಾಜರುಪಡಿಸದೆ ಇದ್ದರೂ ಸಹ ಚಾಸಾ.1 ರವರು ನನ್ನ ಸ್ನೇಹಿತ ಹಾಗೂ ಸಂಬಂಧಿ ಆದ ಕಾರಣ ಪೊಲೀಸರ ಮಾತನ್ನು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಿಃ16.01.2023 ರಂದು ನಾನು ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯಲು ಬಂದಾಗ ಆರೋಪಿತರನ್ನು ನೋಡಿರುತ್ತೇನೆ ಎಂದರೆ ಸಾಕ್ಷಿಯು ವರ್ತೂರು ಪೊಲೀಸ್ ಠಾಣೆಯಲ್ಲಿ ಅವರನ್ನು ನೋಡಿರುವುದಾಗಿ ನುಡಿದಿರುತ್ತಾರೆ. ಆರೋಪಿತರು ಯಾವುದೇ ಸ್ಥಳವನ್ನು ತೋರಿಸಿ ವಸ್ತುಗಳನ್ನು ತೆಗೆದು ಕೊಡದೆ ಇದ್ದರೂ ಸಹ ಪೊಲಿಸೇರು ನಿ.ಪಿ.6 ರಿಂದ 11, 33 ಮತ್ತು 34 ಪೋಟೋಗಳನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ.

15. ಪೊಲೀಸರು ಸದರಿ ವಸ್ತುಗಳನ್ನು ಪ್ಯಾಕ್ ಮಾಡಿ ಹೊಲೆದ ನಂತರ ಅದರ ಮೇಲೆ ಸೀಲ್ ಹಾಕಿರುತ್ತಾರೆ. ಅದು ಯಾವ ಸಂಖ್ಯೆ ಅಥವಾ ಅಕ್ಷರದ ಸೀಲ್ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಸೀಲ್ ಅನ್ನು ಪೊಲೀಸರು ಏನು ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ಸ್ಥಳಕ್ಕೆ ಹೋಗಿರಲಿಲ್ಲ, ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಕ್ಯಾಲನೂರು ಚಿಂಚಾಮಣಿ-ಹೆಚ್ ಕ್ರಾಸ್ ರಸ್ತೆಯಲ್ಲಿ ಇರುವುದಿಲ್ಲ. ಆದರೆ ಹೆಚ್ ಕ್ರಾಸ್-ಕೋಲಾರ ರಸ್ತೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.